ಗಣಿ ಗುತ್ತಿಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 17 (76)

ಸದಸ್ಯರ ಹೆಸರು : ಶ್ರೀ ಟಿ. ಬಿ. ಜಯಚಂದ್ರ (ಶಿರಾ)

ಉತ್ತರಿಸುವವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಕಳೆದ 3 ವರ್ಷದಿಂದ ಕಬ್ಬಿಣದ ಮತ್ತು ಮ್ಯಾಂಗನೀಸ್ ಅದಿರುಗಳ ಗಣಿಗುತ್ತಿಗೆಗಾಗಿ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳು ಯಾವುವು;	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರುಗಳ ಖನಿಜಗಳಿಗೆ ಬಳ್ಳಾರಿ, ಚಿದ್ರದುರ್ಗ, ತುಮಕೂರು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿನ ಪ್ರದೇಶಗಳಲ್ಲಿ ಗಣಿಗುತ್ತಿಗೆಯನ್ನು ಮಂಜೂರು ಮಾಡುವ ಕುರಿತು ಅರ್ಜಿಗಳನ್ನು ಆಹ್ವಾನಿಸಿ, ಒಟ್ಟು 11 ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ.	ಇದುವರೆಗೂ ಗುತ್ತಿಗೆಯನ್ನು ನೀಡಿರುವ ಗಣಿಗಳು ಯಾವುವು;	ಗಣಿಗುತ್ತಿಗೆ ಪ್ರದೇಶಗಳನ್ನು ಅಧಿಸೂಚನೆ ಹೊರಡಿಸಿರುವ ಒಟ್ಟು 11 ಅಧಿಸೂಚನೆಗಳ ಪೈಕಿ, 7 ಅಧಿಸೂಚನೆಗಳನ್ನು ವಿವಿಧ ಅರ್ಜಿದಾರರು ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿ ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಇನ್ನುಳಿದಂತೆ, 2 ಅಧಿಸೂಚನೆಗಳನ್ನು ಪ್ರಶ್ನಿಸಿ ಕೇಂದ್ರ ಸರ್ಕಾರದ ಗಣಿ ಪ್ರಾಧಿಕಾರದ ಮುಂದೆ ಪರಿಷ್ಕರಣ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಹಾಗಾಗಿ, ಸದರಿ 09 ಅಧಿಸೂಚನೆಗಳಲ್ಲಿನ ಪ್ರದೇಶಗಳಲ್ಲಿ ಗಣಿಗುತ್ತಿಗೆಯನ್ನು ಮಂಜೂರು ಮಾಡುವ ಕುರಿತು ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇನ್ನುಳಿದಂತೆ, ಎರಡು ಅಧಿಸೂಚನೆಗಳಿಗೆ ಮಾತ್ರ ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಈ ಪ್ರದೇಶದಲ್ಲಿ ಗುತ್ತಿಗೆಯನ್ನು ಮಂಜೂರು ಮಾಡುವ ಕುರಿತು ನಿಯಮಾನುಸಾರ ಮುಂದಿನ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ.	ಗಣಿಗುತ್ತಿಗೆ ನೀಡುವಾಗ ಕೈಗಾರಿಕೆಯನ್ನು ಹೊಂದಿರುವ ಕಂಪೆನಿಗಳಿಗೆ ಆದ್ಯತೆಯನ್ನು ನೀಡಲಾಗಿದೆಯೇ;	ಒಟ್ಟು 11 ಅಧಿಸೂಚನೆಗಳಲ್ಲಿನ ಪ್ರದೇಶಗಳಲ್ಲಿ ಯಾವುದೇ ಗಣಿಗುತ್ತಿಗೆಯನ್ನು ಮಂಜೂರು ಮಾಡದೇ ಇರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ. ಅದಾಗ್ಯೂ, ಸದರಿ ಅಧಿಸೂಚನೆಯಲ್ಲಿ ಉಕ್ಕು ಕಾರ್ಖಾನೆ ಸ್ಥಾಪಿಸಿರುವ, ಸ್ಥಾಪಿಸಲು ಉದ್ದೇಶಿಸಿರುವ ವ್ಯಕ್ತಿಗಳು : ಕಂಪನಿಗಳವರಿಂದ ಮಾತ್ರ ಗಣಿಗುತ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.
ಈ.	ಹಾಗಿದ್ದಲ್ಲಿ, ಇದುವರೆವಿಗೂ ಈ ರೀತಿಯ ಎಷ್ಟು ಕಂಪೆನಿಗಳಿಗೆ ಗಣಿಗುತ್ತಿಗೆಯನ್ನು ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು);	ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರವು ಕಳೆದ 3 ವರ್ಷಗಳಲ್ಲಿ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳ ವಿವರ

ಕ್ರ. ಸಂ.	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ಪ್ರದೇಶ ವಿವರ			ವಿಸ್ತೀರ್ಣ ಹೆಕ್ಟೇರುಗಳಲ್ಲಿ	ಷರಾ
		ಗ್ರಾಮ	ತಾಲ್ಲೂಕು	ಜಿಲ್ಲೆ		
1.	ಸಂಖ್ಯೆ : ಸಿಐ 211 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ಭಾವಿಹಳ್ಳಿ	ಸಂಡೂರು	ಬಳ್ಳಾರಿ	129.50	ಮೆ: ಅಯ್ಯಪ್ಪ ಮಿನೆರಲ್ಸ್ ರವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 14729/2007ರಲ್ಲಿ ರಿಟ್ ಅಜಿರ್ಯನ್ನು ದಾಖಲಿಸಿದ್ದು ದಿನಾಂಕ : 10-7-2007ರಂದು ತಡೆಯಾಜ್ಞೆ ಪಡೆದಿರುತ್ತಾರೆ.
2.	ಸಂಖ್ಯೆ : ಸಿಐ 152 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ವ್ಯಾಸನಕೆರೆ ಹನುಮನಹಳ್ಳಿ	ಹೊಸಪೇಟೆ	ಬಳ್ಳಾರಿ	133.54	ಶ್ರೀ ಮೊಹಮದ್ ಅಬ್ದುಲ್‌ನಬಿ ರವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 12412/2007ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದ್ದು ದಿನಾಂಕ : 8-8-2007ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

3.	ಸಂಖ್ಯೆ : ಸಿಐ 179 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ಭಾವಿಹಳ್ಳಿ	ಸಂಡೂರು	ಬಳ್ಳಾರಿ	14.16	ಶ್ರೀ ಎ. ಆರ್. ಕಿರಣ್ ಕುಮಾರ ರವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 12838/2007ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿ ದಿನಾಂಕ : 19-12-2007 ರಂದು ತಡೆ ಯಾಜ್ಞೆಯನ್ನು ಪಡೆದಿರುತ್ತಾರೆ.
4.	ಸಂಖ್ಯೆ : ಸಿಐ 76 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ನಾರಾಯಣಪುರ	ಸಂಡೂರು	ಬಳ್ಳಾರಿ	152.56	ಭಾರತ ಸರ್ಕಾರದ ಮಾನ್ಯ ನ್ಯಾಯಾಧಿಕರಣವು ದಿನಾಂಕ : 29-8-2007ರಂದು ತಡೆಯಾಜ್ಞೆ ಯನ್ನು ನೀಡಿರುತ್ತಾರೆ.
5.	ಸಂಖ್ಯೆ : ಸಿಐ 153 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ಜೈಸಿಂಗಪುರ	ಹೊಸಪೇಟೆ	ಬಳ್ಳಾರಿ	89.03	ಶ್ರೀ ಮೊಹಮದ್ ಅಬ್ದುಲ್‌ನಬಿ ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 12399/2007ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದ್ದು ದಿನಾಂಕ : 10-7-2007ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

6.	ಸಂಖ್ಯೆ : ಸಿಐ 158 ಎಂಎಂಎಂ 2004 ಬೆಂಗಳೂರು, ದಿನಾಂಕ : 10-7-2007.	ಕಾಕುಬಾಳ್	ಹೊಸಪೇಟೆ	ಬಳ್ಳಾರಿ	54.33	ಮೆ. ಟೈಡೆಂಟ್ ಅಂಡ್ ಮಿನೆರಲ್ಸ್ ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 11527/2007ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದ್ದು ದಿನಾಂಕ : 3-8-2007ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ.
7.	ಸಂಖ್ಯೆ : ಸಿಐ 132 ಎಂಎಂಎಂ 2004 ಬೆಂಗಳೂರು, ದಿನಾಂಕ : 10-7-2007.	ಬಾಗಲಕೋಟೆ	ಹುನಗುಂದ	ಬಾಗಲಕೋಟೆ	111.29	ಶ್ರೀ ಸೋಮಪ್ಪ ಮಳ್ಳಿಗೇರಿ ಅವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 1199/2007ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದ್ದು ದಿನಾಂಕ: 24-9-2007 ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ.
8.	ಸಂಖ್ಯೆ : ಸಿಐ 197 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ಕೆಂಕೆರೆ	ಚಿಕ್ಕನಾಯಕನಹಳ್ಳಿ	ತುಮಕೂರು	12.14	ಶ್ರೀಮತಿ ವಿ. ಪ್ರಭಾ ಅವರು ಭಾರತ ಸರ್ಕಾರದ ನ್ಯಾಯಾಧಿಕರಣದಲ್ಲಿ ಪರಿಷ್ಕರಣ ಅರ್ಜಿಯನ್ನು ದಿನಾಂಕ: 11-3-2008 ಅನ್ನು ದಾಖಲಿಸಿರುತ್ತಾರೆ.

9.	ಸಂಖ್ಯೆ : ಸಿಐ 174 ಎಂಎಂಎಂ 2005 ಬೆಂಗಳೂರು, ದಿನಾಂಕ : 10-7-2007.	ಕೆ.ಕೆ. ಕಾವಲ್	ಹೊಸದುರ್ಗ	ಚಿತ್ರದುರ್ಗ	508.29	ವಿಚಾರಣೆಗಾಗಿ ಸರ್ಕಾರದಲ್ಲಿ ಬಾಕಿ ಇರುತ್ತದೆ.
10.	ಸಂಖ್ಯೆ : ಸಿಐ 83 ಎಂಎಂಎಂ 2006 ಬೆಂಗಳೂರು, ದಿನಾಂಕ : 10-7-2007.	ಲಕ್ಕಿ ಹಳ್ಳಿ	ಹೊಸದುರ್ಗ	ಚಿತ್ರದುರ್ಗ	54.23	ಮೆ. ಇಂಡಸ್ ಮೈನ್ಸ್ ಅಂಡ್ ಮಿನೆರಲ್ಸ್ ಅವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ : 12048/2007ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದ್ದು ದಿನಾಂಕ : 6-8-2007ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ.
11.	ಸಂಖ್ಯೆ : ಸಿಐ 121 ಎಂಎಂಎಂ 2007 ಬೆಂಗಳೂರು, ದಿನಾಂಕ : 22-8-2007.	ಭಾವಿ ಹಳ್ಳಿ	ಸಂಡೂರು	ಬಳ್ಳಾರಿ	683.51	ಮಾನ್ಯ ನ್ಯಾಯಾಧಿಕರಣ ಮೈನ್ಸ್ ಹೊಸದೆಹಲಿ ಯವರಿಂದ ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

ಶ್ರೀ ಟಿ. ಬಿ. ಜಯಚಂದ್ರ : ಸರ್ಕಾರ ಉತ್ತರ ಕೊಟ್ಟಿದೆ. ಸರ್ಕಾರ ಮಂಜೂರು ಮಾಡಬೇಕಾದಾಗ ಯಾರು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತಾರೆ ಅವರಿಗೆ ಆದ್ಯತೆಯನ್ನು ಕೊಟ್ಟಿದ್ದೇವೆ, ಅವರಿಂದಲೂ ಅರ್ಜಿಯನ್ನು ಕೂಡ ಕರೆದಿದ್ದೇವೆನ್ನುವ ಮಾತನ್ನು ಕೇಳಿದ್ದೀರಿ. ಬಹುಶಃ ನಾವೆಲ್ಲೋ ಒಂದು ಕಡೆ ಯಾರು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತಾರೆ ಅವರಿಗೆ ನಾವು ಮೂಲಭೂತವಾಗಿ ಒತ್ತು ಕೊಡಬೇಕಾಗುತ್ತದೆ, ಸಹಕಾರ, ಪ್ರೋತ್ಸಾಹ ಕೊಡಬೇಕಾಗುತ್ತದೆ. ಆ ಕಾರಣಕ್ಕೋಸ್ಕರ ನೀವೇನಾದರೂ ನಿಮ್ಮ ನಿಯಮಾವಳಿಗಳಲ್ಲಿ ಯಾರು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಅಂಥವರ ಹಿನ್ನೆಲೆಯನ್ನು ನೋಡಿ ಮಂಜೂರು ಮಾಡುವುದಕ್ಕೇನಾದರೂ ನಿಯಮಾವಳಿಗಳಲ್ಲಿ ಬದಲಾವಣೆ ತರುವುದಕ್ಕೇನಾದರೂ ಸಾಧ್ಯವಿದೆಯೇ? ಇದಕ್ಕೆ ಮೂಲಭೂತವಾಗಿ ಬಹುಶಃ ಸ್ವಾತಂತ್ರ್ಯ ಬಂದ ಮೇಲೆ 60 ವರ್ಷಗಳಲ್ಲಿ ನಮ್ಮ ಕರ್ನಾಟಕದಲ್ಲಿ ಅರಣ್ಯ ಪ್ರದೇಶಗಳೆಷ್ಟಿವೆ, ಆ ಗಡಿ ಎಲ್ಲಿ ಎನ್ನುವುದು ಇಲ್ಲಿಯವರೆಗೆ ಇತ್ಯರ್ಥವಾಗಿಲ್ಲ. ಆ ಕಾರಣಕ್ಕೆ ಇವತ್ತು ಗೊಂದಲಗಳಾಗುತ್ತಿವೆ. ಇದು ಮುಖ್ಯವಾದ ಕಾರಣ. ಅದನ್ನು ನಿರ್ದಿಷ್ಟಪಡಿಸಿ, ಈ mines ನವರಿಗೆ ಎಲ್ಲಿ ಮಂಜೂರಾಗಿದೆ ಎನ್ನುವ ಬಗ್ಗೆ ತೀರ್ಮಾನ ಮಾಡುವ ಕುರಿತು ಚಿಂತನೆ ಮಾಡುತ್ತೀರಾ? ಅರಣ್ಯದಲ್ಲಿ, ಕಂದಾಯ ಜಮೀನಿನಲ್ಲಿ ಇವೊತ್ತು ನಮ್ಮ ಸಂಪತ್ತು ಲೂಟಿಯಾಗುತ್ತಿದೆ. ಅದು ಅನಧಿಕೃತವಾಗಿ, ಅಧಿಕೃತವಾಗಿ ಹೀಗೆ ಎರಡೂ ತರಹದಲ್ಲಿ ಆಗುತ್ತಿದೆ. ಈಗ ನೀವು 11 mines ಗೆ recommend ಮಾಡಿದ್ದೇವೆಂದು ಹೇಳಿದಿರಿ. ಇವತ್ತು ನಮ್ಮ ತುಮಕೂರು ಜಿಲ್ಲೆಯಲ್ಲಿ ನನ್ನ ಪಕ್ಕದ ಕ್ಷೇತ್ರದಲ್ಲಿಯೂ ಕೂಡ ಇದು ನಡೆಯುತ್ತಿದೆ. ನೀವು ಅರ್ಜಿ ಹಾಕಿದಿರಿ, ಇಷ್ಟು recommend ಆಗಿದೆ ಎನ್ನುವ ಕಾರಣಕ್ಕೋಸ್ಕರ ಈಗಾಗಲೇ ಅಲ್ಲಿ mining ನಡೆಯುತ್ತಿದೆ. ಇದಕ್ಕೆ ಅವಕಾಶವಿಲ್ಲ. ಆದರೂ ಕೂಡ ನಡೆಯುತ್ತಿದೆ. ಅಕ್ರಮವಾಗಿ ಲೂಟಿಯಾಗುತ್ತಿರುವ ನಮ್ಮ ಸಂಪತ್ತನ್ನು ತಡೆಯುವ ನಿಟ್ಟಿನಲ್ಲಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ ಪ್ರಕಾರ ಈ ಅರ್ಜಿದಾರರಿಗೆ specific ಆಗಿ Mining Lease ಪಡೆಯಬೇಕಾದಂಥವರು ಆ ಉದ್ದಿಮೆಯನ್ನು ಪ್ರಾರಂಭ ಮಾಡುತ್ತಾರೆನ್ನುವವರಿಗೆ ಮಾತ್ರ ಅವಕಾಶವಿದೆ ಎನ್ನುವುದನ್ನು ಕಾನೂನಿನಲ್ಲಿಯೇ ಸ್ಪಷ್ಟವಾದ ಒಂದು ಉದ್ದೇಶವನ್ನು ಇಟ್ಟುಕೊಂಡೇ ಅರ್ಜಿ ಕರೆಯುವಾಗಲೇ ಅವರಿಗೊಂದು ಷರತ್ತಿನ ಬಗ್ಗೆ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ,

"It is hereby informed that the area noted below is available for grant of mining lease to persons, companies entitled to having established higher load based industries or desirous of setting up of an integrated steel plant and requiring the extracted mineral as raw material in such plant." ಎಂದು specific condition ಅನ್ನೇ ಹಾಕಿರಬೇಕಾದಾಗ, ಇವರನ್ನು ಹೊರತುಪಡಿಸಿ ಉಳಿದವರಾರೂ ಅರ್ಜಿ ಹಾಕುವುದಕ್ಕೆ ಸಾಧ್ಯತೆಯಾಗುವುದಿಲ್ಲ. ಇದರ ಜೊತೆಗೆ, ಗಡಿಗಳನ್ನು

ಗುರುತಿಸುವುದರಲ್ಲಿ ವಿಫಲರಾಗಿರುವುದರಿಂದ ಬೇಕಾಬಿಟ್ಟಿಯಾಗಿ ಅಕ್ರಮ ಗಣಿಗಾರಿಕೆ ನಡೆಯಬಹುದೆನ್ನುವುದು ತಮ್ಮ ಆತಂಕವಿದೆ ಎನ್ನುವುದನ್ನು ನಮ್ಮ ಗಮನಕ್ಕೆ ತರುವಂಥ ಕೆಲಸ ಮಾಡುತ್ತಿದ್ದೀರಿ. ಇಲಾಖಾಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ, ಆ ರೀತಿ ಅಕ್ರಮ ಗಣಿಗಾರಿಕೆಯಾಗದ ಹಾಗೆ ನೋಡಿಕೊಳ್ಳುವುದಕ್ಕೆ ಸೂಚನೆ ಕೊಡುತ್ತೇವೆನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ನಿಯಮಾವಳಿಗಳಲ್ಲೇನಾದರೂ ಬದಲಾವಣೆ ತರುತ್ತೀರಾ ಎಂದು ನಾನು ಕೇಳಿದ್ದೇನೆ. ನೀವು ನಿಮ್ಮ ಪ್ರಶ್ನೆ (ಇ)ಗೆ ಕೊಟ್ಟಿರುವ ಉತ್ತರ ನೋಡಿ. "ಒಟ್ಟು 11 ಅಧಿಸೂಚನೆಗಳಲ್ಲಿನ ಪ್ರದೇಶಗಳಲ್ಲಿ ಯಾವುದೇ ಗಣಿ ಗುತ್ತಿಗೆಯನ್ನು ಮಂಜೂರು ಮಾಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲವೆನ್ನುವ" ಮಾತನ್ನು ಹೇಳಿದ್ದೀರಿ. ನೀವು Industries ನವರಿಗೆ ಕೊಡಬೇಕೆಂದು priority ಕೊಟ್ಟಿದ್ದೀರಿ. Compulsory ಯಾಗಿ ಅವರಿಗೇ ಕೊಡಬೇಕೆನ್ನುವುದನ್ನು ನೀವೇನಾದರೂ ಬದಲಾವಣೆ ತರುವುದಕ್ಕೆ ಸಾಧ್ಯವೇ? Industries Department ನಿಂದ ಒಂದು Certificate ತೆಗೆದುಕೊಂಡ ತಕ್ಷಣಕ್ಕೆ ಅವರು Industry ಮಾಡುವುದಕ್ಕಾಗುವುದಿಲ್ಲ. ಇವೆಲ್ಲ Major Industries ನಲ್ಲಿ ಬರತಕಕಂಥವು. ಅದನ್ನು ತಪ್ಪಿಸಬೇಕಾದಾಗ ಈ ರೀತಿಯಾಗಿ ನಾವು Industries ತೆಗೆದುಕೊಂಡು ಬೇರೆ ರೀತಿಯಲ್ಲಿ ದಂಧೆ ಮಾಡುವುದಕ್ಕಿಂತ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಕೊಡುವುದಕ್ಕೆ ಏನಾದರೂ ಸಾಧ್ಯತೆ ಇದೆಯೇ? ಅದನ್ನು ನಿಯಮಾವಳಿಯಲ್ಲಿ ತರುವುದಕ್ಕೆ ಏನಾದರೂ ಸಾಧ್ಯವೇ ಎನ್ನುವುದು ನನ್ನ ಪ್ರಶ್ನೆ.

12-30 PM

ಶ್ರೀ ಸಿ. ಎಂ. ಉದಾಸಿ : ಈಗ ನಿಮಮಾವಳಿಗಳನ್ನು ಸ್ಪಷ್ಟವಾಗಿ ಮಾಡಿದ್ದಾರೆ. ಇಲ್ಲದೇ ಇದ್ದವರಿಗೆ project report ತೆಗೆದುಕೊಂಡು, ಆ projectನ viability ನೋಡಿಕೊಂಡು, ಆ person ನೋಡಿಕೊಂಡು, ಆಮೇಲೆ ಯೋಜನೆಗಳ ಬಗ್ಗೆ eligible ಇದ್ದವರು ಮಾತ್ರ ಅರ್ಜಿ ಹಾಕಲಿಕ್ಕೆ ಸಾಧ್ಯವೆಂದು ಈಗ ಸ್ಪಷ್ಟವಾಗಿ ಇದೆ. ಅವರಿಗೆ plant ಇರಬೇಕು. ಇಲ್ಲದೇ ಇದ್ದರೆ, plant establishment ಮಾಡುವ ಶಕ್ತಿ ಇರಬೇಕು ಎನ್ನುವ ಅರ್ಥದಲ್ಲಿಯೇ ಅಲ್ಲಿ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಿಲ್ಲದಿದ್ದವರಿಗೆ, ಅರ್ಜಿ ಹಾಕಲಿಕ್ಕೆ ಅರ್ಹತೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಇದೆ.

ಶ್ರೀ ಟಿ. ಬಿ. ಜಯಚಂದ್ರ : ಆ ರೀತಿಯಾಗಿ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಮಂಜೂರು ಮಾಡಿರುವ ನಿದರ್ಶನಗಳು ನನ್ನ ಹತ್ತಿರ ಇವೆ. ಅದನ್ನು ನಿಮ್ಮ ಗಮನಕ್ಕೆ ತಂದರ ವಜಾ ಮಾಡುತ್ತೀರಾ? ಮಾಡಲಿಕ್ಕೆ ಸಾಧ್ಯವೇ?

ಶ್ರೀ ಸಿ. ಎಂ. ಉದಾಸಿ : ಗಾಳಿಗೆ ತೂರಿದಾಗ ಕ್ರಮ ತೆಗೆದುಕೊಳ್ಳಲೇಬೇಕು. ಮಾಡಲಿಕ್ಕೆ ಬರುತ್ತದೆ.

ಅಧ್ಯಕ್ಷರು : ಜಯಚಂದ್ರರವರೆ, ಅವರಿಗೆ details ಕೊಡಿ.

ಶ್ರೀ ಸಿ. ಎಂ. ಉದಾಸಿ : Plant ಇದ್ದವರಿಗೆ ನಾವು ಕೊಟ್ಟು ತೆಗೆದುಕೊಡಿರುವಂಥದ್ದನ್ನು ನೋಡಿ. ಈಗ 1 ಸಾವಿರ ಟನ್ capacity plant ಇದ್ದವರು ತೆಗೆದುಕೊಂಡು 5 ಸಾವಿರ ಟನ್ ಮೇಲೆ extract ಮಾಡುತ್ತಿದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಆ Condition ಅದರಲ್ಲಿರುವಾಗ ಬೇರೆಯದಕ್ಕೆ ಉಪಯೋಗ ಮಾಡುವುದಿಲ್ಲವೆನ್ನುವ ಷರತ್ತಿದೆ ಎನ್ನುವುದನ್ನು ನಾನು ಓದುತ್ತಿದ್ದೇನೆ. ಇದರಲ್ಲಿ specific ಆಗಿ ಇದೆ. "The Minerals as raw material in such a plant" ಎಂದು ಇದೆ. ಆ ರೀತಿ ನಿರ್ಬಂಧ ಇದೆ.

ಶ್ರೀ ಟಿ. ಬಿ. ಜಯಚಂದ್ರ : ಅನಧಿಕೃತವಾಗಿ ಲೂಟಿಯಾಗುತ್ತಿರುವ ಬಗ್ಗೆ, false permit ನಲ್ಲಿ ಸಾಗಣೆ ಆಗುತ್ತಿರುವ ಬಗ್ಗೆ ನೀವು ಹೇಳಲಿಲ್ಲ.

ಶ್ರೀ ಸಿ. ಎಂ. ಉದಾಸಿ : ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವುದರ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಇಲಾಖೆಗೆ ಸೂಚನೆ ಕೊಡುತ್ತಿದ್ದೇವೆನ್ನುವ ಮಾತನ್ನು ನಾನು ಆಗಲೇ ಹೇಳಿದೆ.

ರಾಜ್ಯ ಹೆದ್ದಾರಿಗಳ ದುಸ್ಥಿತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 18 : (60)

ಮಾನ್ಯ ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಹೆಚ್. ಸಿ. (ಮಾಗಡಿ)

ಉತ್ತರಿಸುವ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
1.	ಮಾಗಡಿ-ಗುಡೆಮಾರನಹಳ್ಳಿ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿ - 3 ಹಾಗೂ ಮಾಗಡಿ ತಾಲ್ಲೂಕಿನ ಕಲ್ಯಾ - ಶ್ರೀಪತಿಹಳ್ಳಿ - ಸಾತನೂರು ರಾಜ್ಯ ಹೆದ್ದಾರಿ - 94 ಇವುಗಳು ಪ್ರಯಾಣ ಮಾಡಲಾಗದಷ್ಟು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
2.	ಇವುಗಳ ದುರಸ್ತಿಗಾಗಿ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?	ಈ ರಸ್ತೆಗಳನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ಈ ಕೆಳ ಕಂಡಂತೆ ಕ್ರಮ ತೆಗೆದುಕೊಳ್ಳಲಾಗಿದೆ. 1. ಮಾಗಡಿ - ಗುಡೆಮಾರನಹಳ್ಳಿ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿ-3 :